ನಂತರ ಈಗಿರತಕ್ಕಂಥ ಸಿಬ್ಬಂದಿಯನ್ನೇ ತೆಗೆದುಕೊಳ್ಳಬೇಕೆಂದು ಅವರನ್ನೇ ಪುನಃ ಮುಂದುವರಿಸಿಕೊಂಡು ಹೋಗಬೇಕೆಂದು ಕಡ್ಡಾಯವಾಗಿ ಕೆಲವೊಂದು ರಿಸ್ಟ್ರಕ್ಷನ್ ಹಾಕುತ್ತೀರಾ? ಅಥವಾ ಪ್ರೈವೇಟ್ ನವರು ಅವರಿಗೆ ಬೇಕಾದಂಥ ಸಿಬ್ಬಂದಿಯನ್ನು ಅವರೆ ಆರಿಸಿಕೊಳ್ಳಬಹುದಾ ?

ಶ್ರೀ ಕೆ. ಹೆಚ್. ಪಾಟೀಲ್.— ಸಹಕಾರ ರಾಜ್ಯ ಸಚಿವರ ಪರವಾಗಿ ಪ್ರೈವೇಟ್‌ನವರಿಗೆ ಕೊಡಬೇಕೆಂದು ಇನ್ನೂ ನಿರ್ಣಯ ಮಾಡಿಲ್ಲ ಟೆಂಡರ್ ಕರೆದಿದ್ದಾರೆ ಪ್ರಾಯಶ: ಇದರ ಪ್ರಾಮುಖ್ಯತೆಯನ್ನು ನೋಡಿಕೊಂಡು ಇದನ್ನು ಸಹಕಾರ ಸಂಘಕ್ಕೆ ಕೊಡಬೇಕೆಂದು ಮಾಡಿರುತ್ತೇವೆ. ಆದುದರಿಂದ ಈಗ ಈ ಪ್ರಶ್ನೆ ಉದ್ಭವ ಆಗುವುದಿಲ್ಲ.

ಶ್ರೀ ಸಿ. ಎಸ್. ನಾಡಗೌಡ.— ಟೆಂಡರ್ ಕರೆದಿರುತ್ತಾರೆಂದು ಹೇಳಿದ ಮೇಲೆ ಈ ಕೊಶ್ಚನ್ ಬಂದೇ ಬರುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಟೆಂಡರ್ ಹಾಕಿದ ನಂತರ ಆ ಮೇಲೆ ವಿಚಾರ ಮಾಡುತ್ತೇವೆ. ಈಗ ಸ್ಪಾಫ್‌ನವರು ಯಾರಿದ್ದಾರೆ ಅವರೂ ಕೂಡಿಯೇ ಹೋಗಬೇಕಾಗುತ್ತದೆ. ಸ್ಪಾಫ್‌ನವರನ್ನು ಮನೆಗೆ ಕಳುಹಿಸುವುದಿಲ್ಲ.

ಶ್ರೀ ಕೆ. ಹೆಚ್. ಕಾರಡಗಿ.— ಮಾನ್ಯ ಅಧ್ಯಕ್ಷರೇ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಖಾಸಗಿಯವರಿಗೆ ಕೊಡಬೇಕೆಂಬ ನಿರ್ಧಾರ ಸರಕಾರದ ದಿಸೆಯಲ್ಲಿ ಈಗಾಗಲೆ ಹೊರಟಿದೆ. ಆದ್ದರಿಂದ ಅವರಿಗೆ ಕೊಡುತ್ತೀರಿ ಎಂಬುದು ಖಚಿತವಾಯಿತು. ಇದು ಬಹಳ ಜಟಿಲವಾದ ಸಮಸ್ಯೆ. ನಾಲ್ಕು ವರ್ಷಗಳಿಂದ ಈ ಮಿಲ್ ಮುಚ್ಚಿದ್ದು ಬಹಳಷ್ಟು ಬಡ ನೌಕರರಿಗೆ ತಮ್ಮ ಹೆಂಡತಿ ಮಕ್ಕಳ ಜೊತೆ ರಸ್ತೆಯಲ್ಲಿ ಭಿಕ್ಷೆ ಬೇಡುವಂತಹ ಪರಿಸ್ಥಿತಿ ಉದ್ಭವವಾಗಿದೆ. ಮಾನ್ಯ ರಾಜೀವ್‌ಗಾಂಧಿಯವರು ಪ್ರಧಾನಿಮಂತ್ರಿಯಾಗಿದ್ದಾಗ ಬಿಜಾಪುರಕ್ಕೆ ಬಂದಿದ್ದಾಗ ಅವರಿಗೂ ತಿಳಿಸಿದ್ದೆವು. ಬಿಜಾಪುರ ಮತ್ತು ಬಾಗಲಕೋಟೆ ನೂಲಿನ ಗಿರಣಿಯನ್ನು ತೀವ್ರವಾಗಿ ಪ್ರಾರಂಭ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆಂದು ಅವರೂ ಕೂಡ ಹೇಳಿದ್ದರು. ಇದನ್ನು ಖಾಸಗಿಯವರಿಗೆ ಕೊಡಿರಿ ಅಥವಾ ಯಾವ ರೀತಿಯಿಂದಲಾದರೂ ಪ್ರಾರಂಭ ಮಾಡಿರಿ. ಮಾಡಿದ ಮೇಲೆ ಮಾನ್ಯ ಸದ್ಯಸರು ಹೇಳಿದ ಹಾಗೆ ಹಿಂದೆ ಇದ್ದ ನೌಕರರಿಗೇ ಪುನಃ ನೌಕರಿ ಕೊಡುವ ಕರಾರನ್ನು ಹಾಕಿ ಖಾಸಗಿಯವರಿಗೆ ಕೊಡುತ್ತೀರಾ ಎಂಬುದು ಮುಖ್ಯವಾದುದು. ಖಾಸಗಿಯವರಿಗೆ ಇದನ್ನು ಕೊಡುತ್ತೀರಿ ಎಂದಾದ ಮೇಲೆ ಈ ಪ್ರಶ್ನೆ ಬಂದೆ ಬರುತ್ತದೆ. ಆದ್ದರಿಂದ ಇದರ ಬಗ್ಗೆ ನಿಖರವಾದ ಉತ್ತರವನ್ನು ಮಾನ್ಯ ಸಚಿವರು ಹೇಳಲೇಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ರಾಜೀವಗಾಂಧಿಯವರು ಬಂದು ಹೇಳಿದ ನಂತರ ಏನಾಗಿದೆ. ಅದಾದನಂತರ ಮಾನ್ಯ ಎಂ. ಎಲ್. ಎ.ಗಳು ಎಂ. ಪಿ.ಗಳು ಏನು ಹೇಳಿದ್ದಾರೆ, ಅದೆಲ್ಲಾ ಸಂಗತಿ ಸರಕಾರದ ಗಮನದಲ್ಲಿದೆ. ಸರಕಾರದವರು ಸಹ ಯಾವ ನೌಕರದಾರರಿಗೂ ತೊಂದರೆ ಮಾಡಬಾರದು ಎಂಬ ಅಭಿಲಾಷೆ ಉಳ್ಳವರಾಗಿದ್ದಾರೆ. ಆರ್ಥಿಕ ಪರಿಸ್ಥಿತಿಗನುಗುಣವಾಗಿ ಪಂತ್ತು ಆ ಸಂಘದಲ್ಲಿ ನಡೆದ ನಡವಳಿಕೆಗನುಗುಣವಾಗಿ ತಡವಾದುದಕ್ಕಾಗಿ ನಾವು ವಿಷಾದ ಪಡುತ್ತೇವೆ. ಇದರ ಬಗ್ಗೆ ಬೇಗ ತೀರ್ಮಾನ ತೆಗೆದುಕೊಳ್ಳಲು ಒಂದು ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿದ್ದಾರೆ. ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ ತೀವ್ರವಾಗಿ ಟೆಂಡರ ಕರೆದು. ಟೆಂಡರ್ ಪರಿಶೀಲನೆ ಕೆಲಸವನ್ನು ಆದಷ್ಟು ಬೇಗನೆ ಮಾಡಬೇಕೆಂದು ಆದೇಶ ಕೊಟ್ಟಿದ್ದಾರೆ. ನಂತರ ಎಲ್ಲಾ ಎಂ.ಎಲ್.ಎ. ಗಳಿಗೂ ಸಮಾಧಾನವಾಗುವ ರೀತಿಯಲ್ಲಿ ಇದನ್ನು ಚಾಲೂ ಮಾಡುವ ಇಚ್ಛೆ ಸರಕಾರಕ್ಕೆ ಇದೆ.

ಅಧ್ಯಕ್ಷರು:— ಪ್ರಶ್ನೆ ೨೩೪ ಶ್ರೀ ಷಫಿ ಅಹಮದ್. ಸಚಿವರು ಇನ್ನೊಂದು ಹೌಸ್‌ಗೆ ಹೊಗಬೇಕಾಗಿದೆ. ಆದುದರಿಂದ ಇದನ್ನು ಬೇಗ ತೆಗೆದುಕೊಳ್ಳುತ್ತೇನೆ.

ಶ್ರೀ ಷಫಿ ಅಹಮದ್.—ಇದು ಟ್ರಾನ್ಸ್‌ಫರ್‌ಗೆ ಆಗಿದೆ.

ಪ್ರಶ್ನೆ ೨೩೬(೬೭೩) **ಶ್ರೀ ಕೆ. ಹೆಚ್.** ಹನುಮೇಗೌಡ

(ಮಾನ್ಯ ಸದಸ್ಯರು ಗೈರು ಹಾಜರಿದ್ದರು)

ಕರ್ನಾಟಕ ತುಂಡು ಭೂಮಿ ಕಾಯ್ದೆಯ ಬಗ್ಗೆ

***೬೭೩. ಶ್ರೀ ಎಂ. ಮಹದೇವ (ನಂಜನಗೂಡು).**— ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ತುಂಡು ಭೂಮಿ ಕಾಯ್ದೆಯಿಂದ ಸಣ್ಣ ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಅ) ಈ ಕಾಯ್ದೆಯಲ್ಲಿ ಸಮೂಹದಿಸಿರುವ ಸೀಮಿತ ವಿಸ್ತೀರ್ಣ ಸಣ್ಣ ಪುಟ್ಟ ರೈತರುಗಳಲ್ಲಿ ವಿವಾದ ತುಂಬಾ ಉಂಟಾಗಿ ತೊಂದರೆಯಾಗಿರುವುದರಿಂದ ಈ ಬಗ್ಗೆ ಸರ್ಕಾರವು ತಿದ್ದುಪಡಿ ಮಾಡಲು ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).— ಅ) ಬಂದಿದೆ.

ಆ) "ಸ್ಟಾಂಡರ್ಡ್ ಪರಿಯಾ"ವನ್ನು ಪುನರ್ ನಿಗದಿಪಡಿಸಲು ಸರ್ಕಾರ ತೀರ್ಮಾನಿಸಿದ್ದು ಈ ಬಗ್ಗೆ ಒಂದು ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ತಜ್ಞರ ಸಮಿತಿ ವರದಿಯನ್ನು ಸಲ್ಲಿಸಿದ್ದು ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಮಹದೇವ್.— ಅಧ್ಯಕ್ಷರೇ. ಈ ತುಂಡುಭೂಮಿ ಕಾಯಿದೆಯಿಂದ ಸಣ್ಣ ರೈತರು, ಅತಿಸಣ್ಣ ರೈತರಿಗೆ ಬಹಳ ಅನಾನುಕೂಲವಾಗಿದೆ. ಮತ್ತು ಇದರಿಂದ ದೊಡ್ಡ ಭೂಮಿಯನ್ನು ಹೊಂದಿರತಕ್ಕಂಥವರು ಲಾಭ ಪಡೆಯುತ್ತಿದ್ದಾರೆ. ಈ ತುಂಡು ಭೂಮಿಯನ್ನು ಬಡವನಾಗಿರತಕ್ಕಂಥ ರೈತ ಅವನಿಗೆ ತೊಂದರೆ ಆದಾಗ ಮಾರುವುದಕ್ಕೆ ಅವಕಾಶ ಇಲ್ಲದೆ ರಾಜ್ಯದಲ್ಲಿರುವ ಬಹಳ ಜನ ಬಡವರು ಅತಿಸಣ್ಣ ರೈತರು ತೊಂದರೆಪಡುತ್ತಿದ್ದಾರೆ. ಇದರ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳುತ್ತೀರಾ ? ಈ ವಿಚಾರದಲ್ಲಿ ತಜ್ಞರ ಸಮಿತಿ ವರದಿ ಸಲ್ಲಿಸಿದೆ ಎಂದು ತಿಳಿಸಿದ್ದೀರಿ. ತಜ್ಞರ ಸಮಿತಿ ಏನು ವರದಿ ಸಲ್ಲಿಸಿದೆ ಎಂಬುದನ್ನು ಮಾನ್ಯ ಸಚಿವರು ಸದನಕ್ಕೆ ತಿಳಿಸುತ್ತಾರೆಯೇ ?

ಶ್ರೀ ಕೆ. ಹೆಚ್. ಪಾಟೀಲ್.— ಮಾನ್ಯ ಅಧ್ಯಕ್ಷರೆ, ಈ ತುಂಡು ಜಮೀನಿನ ಬಗ್ಗೆ ಅನೇಕ ಸಣ್ಣ ಸಣ್ಣ ಹಿಡುವಳಿದಾರರಿಗೆ ಬಹಳ ತೊಂದರೆಯಾಗಿದೆ. ಸರಕಾರಕ್ಕೆ ಮೇಲಿಂದ ಮೇಲೆ ಇದು ಗಮನಕ್ಕೆ ಬಂದಿದೆ. ತುಂಡುವಳಿ ಭೂಮಿಯ ಕಾನೂನನ್ನು ತೆಗೆದುಹಾಕುವ ವಿಷಯದಲ್ಲಿ ಸಹ ಸರಕಾರದ ಪರಿಶೀಲನೆ ನಡೆದಿದೆ. ಆದರ ಮೇಲೆ ಕೇಂದ್ರ ಸರಕಾರದವರು ತುಂಡುವಳಿ ಕಾನೂನನ್ನು ಬದಲಾವಣೆ ಮಾಡಬಾರದೆಂಬ ಅಭಿಲಾಷೆ ಉಳ್ಳವರಾಗಿರುತ್ತಾರೆ. ಆದ್ದರಿಂದ ಈ ಕಾನೂನಿನ ಪರಿಶೀಲನೆ ಸ್ವಲ್ಪ ಮಂದಗತಿಯಿಂದ ಸಾಗಿದೆ. ಆದರೂ ಬಡಜನರಿಗೆ ತೊಂದರೆಯಾಗಿರುವುದು ನಮ್ಮ ಗಮನಕ್ಕೆ ಬಂದಿರುವಾಗ ಯಾವರೀತಿ ಆ ತೊಂದರೆಯನ್ನು ನಿವಾರಣೆ ಮಾಡಬೇಕೆಂಬುದು ಸರ್ಕಾರದ ತೀವ್ರವಾದ ಪರಿಶೀಲನೆಯಲ್ಲಿದೆ.

೧೨-೦೦ ಮಧ್ಯಾಹ್ನ

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಜ್ಞರ ಸಮಿತಿಯವರು ವರದಿಯನ್ನು ಸಲ್ಲಿಸಿದ್ದಾರೆ ಎಂದು ಹೇಳಿದ್ದಾರೆ. ಆ ವರದಿಯನ್ನು ಸದನದ ಮುಂದೆ ದಯಮಾಡಿ ಮಂಡಿಸುತ್ತಾರೆಯೇ ?

ಶ್ರೀ ಕೆ. ಎಚ್. ಪಾಟೀಲ್.— ಶ್ರೀ ಆರ್. ರಾಮಣ್ಣ, ವಿಶಾಲಯ್ಯ ಮತ್ತು ಚಂದ್ರಪ್ಪ ಈ ಮೂರು ಜನ ತಜ್ಞರನ್ನು ಸರ್ಕಾರ ನೇಮಿಸಿತ್ತು. ಅವರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ. ಆ ವರದಿಯನ್ನು ನಾನು ಸದನದ ಮುಂದೆ ಇಡುತ್ತೇನೆ. ಇಚ್ಛೆಯುಳ್ಳ ಮಾನ್ಯ ಸದಸ್ಯರು ಅದನ್ನು ನೋಡಿಕೊಳ್ಳಬಹುದು.

SRI K. LAKKAPPA.— Sir, this is a wide ranging question involving small farmers. This Sub-Division and Fragmentation Act has created lot of problems in the rural areas and revenue has been dwindled out of this Act, because registration has been restricted to small farmers either to sell it or buy it. Neither it has helped the small farmers not the big land owners. It has brought out certain problems of selling the property to anybody and in this way they have created lot of problems in the rural areas. Hon'ble Minister for Revenue just now stated that attempts are being made by the Government to see that the Act is either replaced or amended, as there is restriction from the Central Government I would like to know as to what are the steps taken by the Govern-

ment to improve the situation and to solve the problems so that the Hon'ble Minister can give administrative orders to all the Revenue officers to see that this problem is solved atleast to the extent till the Central Act or the Central legislation is brought out?

SRI K. H. PATIL.—Government is seriously considering to give relief to all those who are suffering from the provisions of the Act and as a matter of fact, we have instructed the officials to see that as far as possible, if the owner of the land applies Affidavit, he may be permitted to sell in case he is in difficulty and the owner of the land is entitled to sell it to the adjoining landholders. In this way, the Government is doing without amending the Act. Government is seriously considering to abolish the Act and the matter is under serious consideration of the Government.

ಶ್ರೀ ಸಿ. ಬೈರೇಗೌಡ.—ಈ ಕಾಯ್ದೆ ಇರುವುದರಿಂದ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಲಂಚದ ಹಾವಳಿ ವಿಪರೀತವಾಗಿ ಆಗಿದೆ. ಇದನ್ನು ತಾವು ಸ್ಯಾಂಪಲ್ ಆಗಿ ತೆಗೆದುಕೊಂಡು ಕೆಲವು ಕಡೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಈ ಕಾಯ್ದೆ ಜಾರಿಯಲ್ಲಿರುವುದರಿಂದಲೇ ಲಂಚ ಜಾಸ್ತಿಯಾಗಿದೆ. ತಾವು ಉದಾಹರಣೆಯಾಗಿ, ಬೆಂಗಳೂರು ಸಬ್ ರಿಜಿಸ್ಟ್ರಾರ್ ಆಫೀಸ್‌ಗೆ ಹೋಗಿ ನೋಡಿದರೆ ತಮಗೆ ಗೊತ್ತಾಗುತ್ತದೆ. ರವಿನ್ಯೂ ಸೈಟ್‌ನ್ನು ರಿಜಿಸ್ಟರ್ ಮಾಡುವ ಮೂಲಕ ಈ ಕಾಯ್ದೆಯನ್ನು ಉಲ್ಲಂಘನೆ ಮಾಡಿರುವುದು ನಡೆದಿದೆ. ತಾವು ದಯಮಾಡಿ ಇದನ್ನು ಪರಿಶೀಲನೆ ಮಾಡಿದರೆ ಯಾರು ತಪ್ಪಿತಸ್ಥ ಸಬ್ ರಿಜಿಸ್ಟ್ರಾರ್ ಇರುತ್ತಾರೆ, ಅವರು ಸಿಕ್ಕಿಹಾಕಿಕೊಳ್ಳುತ್ತಾರೆ, ಅಂತಹವರ ಮೇಲೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಗಾಳಿ ಸುದ್ದಿ ಮೇಲೆಂದ ಈ ಆಕ್ಟ್‌ಗೆ ತಿದ್ದುಪಡಿ ತಂದು ಬದಲಾವಣೆ ಮಾಡಬೇಕೆಂಬುದು ಸರ್ಕಾರದ ಇಚ್ಛೆಯಾಗಿದೆ. ಈ ಹಿಂದೆ ನಮ್ಮಲ್ಲಿನ ಫ್ಯಾಕ್ಟರಿ ಆಕ್ಟ್‌ನಲ್ಲಿಯೂ ಇದೆ ರೀತಿ ನಡೆದು ನಾವು ಅದನ್ನು ಸ್ವಲ್ಪ ಸಡಿಲಗೊಳಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಲಂಚದ ಹಾವಳಿ ಎಲ್ಲಿ ನಡೆದಿದೆ ಎನ್ನುವುದನ್ನು ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ ಅಂತಹ ಸಬ್ ರಿಜಿಸ್ಟ್ರಾರ್‌ರನ್ನು ಕೂಡಲೇ ತಕ್ಷಣ ಸಸ್‌ಪೆಂಡ್ ಮಾಡುವ ಯೋಚನೆ ಮಾಡುತ್ತೇನೆ.

(ಪ್ರೋ. ಎಂ. ಡಿ. ನಂಜುಂಡಸ್ವಾಮಿಯವರು ಗೈರು ಹಾಜರಾಗಿದ್ದರು)

ವಾಯು ಮತ್ತು ನೀರಿನ ಮಾಲಿನ್ಯ

೬೦೯. ಸಿ. ಬೈರೇಗೌಡ (ವೇಮಗಲ್).—ಮಾನ್ಯ ಶಿಕ್ಷಣ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಾಳಿ ಮತ್ತು ನೀರಿನ ಮಾಲಿನ್ಯವನ್ನು ತಡೆಗಟ್ಟುವ ಕಾನೂನು ಕರ್ನಾಟಕದಲ್ಲಿ ಜಾರಿಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ೩ ವರ್ಷಗಳಿಂದ ತೆಗೆದುಕೊಂಡ ಕ್ರಮಗಳೇನು ? ಹಾಗೂ ಹೂಡಿದ ಮೊಕದ್ದಮೆಗಳೆಷ್ಟು ?

ಇ) ಶಿಕ್ಷೆಯಾದ ಮೊಕದ್ದಮೆಗಳು ಎಷ್ಟು ?

ಈ) ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾಂ ನಗರಗಳಲ್ಲಿ ಗಾಳಿ ಮಾಲಿನ್ಯ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ?

ಉ) ಹಾಗಿದ್ದಲ್ಲಿ ಇದನ್ನು ನಿಯಂತ್ರಿಸಲು ತೆಗೆದುಕೊಂಡ ಕ್ರಮಗಳಾವುವು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ರಾಜ್ಯದಲ್ಲಿ ಜಲ (ಮಾಲಿನ್ಯ ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ ೨೧.೪.೧೯೭೪ ರಿಂದ ಮತ್ತು ವಾಯು (ಮಾಲಿನ್ಯ ನಿವಾರಣ ಮತ್ತು ನಿಯಂತ್ರಣ) ಕಾಯ್ದೆ ೧೫.೧೧.೮೩ ರಿಂದ